# ಯೋಜನಾ ಕಾರ್ಯದ ಮೂಲಕ ಸಮಾಜೋ-ಭಾವನಾತ್ಮಕ ಕಲಿಕೆ

ಚಿಕ್ಕವೀರೇಶ್ ಎಸ್. ವಿ

ಮಕ್ಕಳ ಕಲಿಕೆಯು ಅವರ ಭಾವನೆಗಳೊಂದಿಗೆ ಸಂಬಂಧ ಹೊಂದಿರುತ್ತದೆ; ನಾವು ಆ ಎರಡನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಭಾವನೆಗಳೊಂದಿಗೆ ಸಂಬಂಧ ಹೊಂದಿರುವಾಗ ಮಾತ್ರ ಮಕ್ಕಳ ಕಲಿಕೆಯು ಪರಿಣಾಮಕಾರಿಯಾಗಿರಲು, ಬಹಳ ಕಾಲ ಉಳಿಯುವಂತಾಗಲು ಸಾಧ್ಯ. ಕೋವಿಡ್–19 ಮಹಾರೋಗ–ದಿಂದಾಗಿ ಸರಿಸುಮಾರು ಎರಡು ವರ್ಷಗಳ ಕಾಲ ಶಾಲೆಗಳು ಮುಚ್ಚಲ್ಪಟ್ಟಿದ್ದುದರಿಂದ ಅವರ ಶೈಕ್ಷಣಿಕ ಕಲಿಕೆಗೆ ತೊಂದರೆ ಉಂಟಾಗಿರುವುದು ಮಾತ್ರವಲ್ಲದೆ, ಅವರ ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಗೂ ಅದು ತೊಡಕುಂಟುಮಾಡಿದೆ. ಆದ್ದರಿಂದ, ಮಕ್ಕಳ ಕಲಿಕಾ ಚಟುವಟಿಕೆಯು ಸಾಮಾಜಿಕ ಮತ್ತು ಭಾವನಾತ್ಮಕ ಆಯಾಮಗಳಿಗೆ ಒತ್ತು ನೀಡುವುದು ಹಿಂದೆಂದಿಗಿಂತಲೂ ಇಂದು ಹೆಚ್ಚು ಅಗತ್ಯವಾಗಿದೆ. ಕಲಿಕೆಯ ಈ ಅಂಶವು ಚಟುವಟಿಕೆಗಳ ಮತ್ತು ತರಗತಿ ಪ್ರಕ್ರಿಯೆಯ ಭಾಗವಾಗಬೇಕು. ಮಕ್ಕಳ ಸಾಮಾಜಿಕ ಮತ್ತು ಭಾವನಾತ್ಮಕ ಅಗತ್ಯತೆಗಳನ್ನು ಕಲಿಕೆಯ ಪರಿಕಲ್ಪನೆಗಳು ಮತ್ತು ಫಲಿತಗಳೊಂದಿಗೆ ಒಂದಾಗಿಸಬೇಕು. ಇದನ್ನು ಬೆಂಬಲಿಸಲು ಅನೇಕ ಬೋಧನಾ ವಿಧಾನದ ಅಭ್ಯಾಸಗಳನ್ನು ಅಳವಡಿಸಿ–ಕೊಳ್ಳಬಹುದು. ಇದರಲ್ಲಿ ಮುಖ್ಯವಾದವುಗಳೆಂದರೆ ಕಿರುನಾಟಕ, ನಾಟಕ, ಕಲೆಗಳು, ಗುಂಪು ಚಟುವಟಿಕೆ, ಮತ್ತು ಸಮ್ಮತಿ ಹಾಗೂ ಅಸಮ್ಮತಿ/ಭಿನ್ನಾಭಿಪ್ರಾಯಕ್ಕೆ ಅವಕಾಶವಿರುವ ಚಟುವಟಿಕೆಗಳು, ಗಟ್ಟಿಯಾಗಿ ಓದುವುದು, ಕ್ರಿಯಾಶೀಲವಾಗಿ ಕೇಳಿಸಿಕೊಳ್ಳುವುದು, ಮುಕ್ತ ಚರ್ಚೆಗಳು ಮತ್ತು ಸ್ವತಂತ್ರವಾದ ಬರವಣಿಗೆ. ಇಂತಹ ಚಟುವಟಿಕೆಗಳು ಮಕ್ಕಳ ಸಮಗ್ರ ಬೆಳವಣಿಗೆಗೆ ಕೊಡುಗೆ ನೀಡಬಲ್ಲವು. ಇಂತಹ ಒಂದು ಪ್ರಯತ್ನದ ಕುರಿತಾದ ನನ್ನ ಅನುಭವ ಮತ್ತು ಅದರಿಂದ ನಾನು ಗಳಿಸಿಕೊಂಡ ಒಳನೋಟಗಳನ್ನು ನಾನಿಲ್ಲಿ ಮಂಡಿಸಲಿದ್ದೇನೆ. ನಾನು ಮಕ್ಕಳಿಗೆ ವಹಿಸಿಕೊಟ್ಟ ಒಂದು ಯೋಜನೆಯ ನಿರೂಪಣೆ, ಒಳಗೊಂಡಿದ್ದ ಪ್ರಕ್ರಿಯೆಗಳು ಹಾಗೂ ಮಕ್ಕಳ ಸಾಮಾಜಿಕ ಮತ್ತು ಭಾವನಾತ್ಮಕ ಅಗತ್ಯಗಳನ್ನು ಬೆಂಬಲಿಸುವಲ್ಲಿ ಅದು ನೆರವು ನೀಡಿದ ವಿವಿಧ ಮಾರ್ಗಗಳು, ಇದನ್ನು ಕುರಿತಾದ ಕಥನವನ್ನು ಮುಂದೆ ಹೇಳಲಾಗಿದೆ.

## ಯೋಜನಾ ಮೇಳದ ಅನುಭವ

ನಾವು ಒಂದು 'ಯೋಜನಾ ಮೇಳ'ವನ್ನು ಯೋಜಿಸಿದೆವು. ಆರಂಭದಲ್ಲಿ ನಾವು ಶಿಕ್ಷಕರೊಡನೆ, ಮಕ್ಕಳು ಯಾವ ಯೋಜನೆಗಳ ಬಗ್ಗೆ ತಾವೇ ಸ್ವತಃ ಮಾಹಿತಿ ಅಥವಾ ದತ್ತಾಂಶಗಳನ್ನು ಸಂಗ್ರಹಿಸಬಹುದೋ ಅಂತಹ ಯೋಜನೆಗಳ ಕುರಿತು ಚರ್ಚಿಸಿದೆವು. ಆಗ ಮುನ್ನೆಲೆಗೆ ಬಂದಂಥ ವಿಷಯಗಳಲ್ಲಿ ನಾವು ಹಳ್ಳಿಗಳಲ್ಲಿರುವ ನೀರಿನ ಮೂಲಗಳ ಕುರಿತಾದ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ನಿರ್ಧರಿಸಿದೆವು. ಜೀವವನ್ನು ಕಾಪಾಡುವುದಲ್ಲದೇ, ನೀರಿನ ಪ್ರಾಮುಖ್ಯತೆಯು ಸಾಮಾಜಿಕ, ಸಾಂಸ್ಕೃತಿಕ ಮತ್ತು ಚಾರಿತ್ರಿಕ ಕ್ಷೇತ್ರಗಳನ್ನೂ ಆವರಿಸಿಕೊಳ್ಳುತ್ತದೆ ಎಂಬ ಕಾರಣದಿಂದಾಗಿ ನಾವು ಈ ವಿಷಯವನ್ನು ಆಯ್ಕೆ ಮಾಡಿಕೊಂಡೆವು. ಮಕ್ಕಳು ಈ ವಿಷಯದ ಕುರಿತು ತಮ್ಮ ಹಳ್ಳಿಗಳಲ್ಲಿ ಮಾಹಿತಿಯನ್ನು ಹೆಕ್ಕಿ ತೆಗೆಯಬೇಕಾಗುತ್ತದೆ. ರಾಜಸ್ಥಾನದಲ್ಲಿ ನೀರಿನ ಅಭಾವದ ಬಗ್ಗೆ ವಿವರಿಸುವ 'ವಾಟರ್ ವೈವ್ಸ್' ಎಂಬ ಶೀರ್ಷಿಕೆಯ ಸಾಕ್ಷಚಿತ್ರ ಪ್ರದರ್ಶನದ ಮೂಲಕ ನಾವು 5, 6 ಮತ್ತು 7ನೇ ತರಗತಿಗಳ 30 ವಿದ್ಯಾರ್ಥಿಗಳೊಂದಿಗೆ ಅನನ್ಯವಾದ ರೀತಿಯಲ್ಲಿ ಈ ಯೋಜನೆಯನ್ನು ಆರಂಭಿಸಿದೆವು. ಸಾಕ್ಷ್ಯಚಿತ್ರ ಪ್ರದರ್ಶನದ ಬಳಿಕ ನೀರಿನ ಅಭಾವದ ಭಯಾನಕತೆ ಮತ್ತು ನೀರನ್ನು ಸಂರಕ್ಷಿಸಬೇಕಾದ ಪ್ರಾಮುಖ್ಯತೆಯ ಬಗ್ಗೆ ಚರ್ಚೆ ನಡೆಯಿತು. ತಮ್ಮ ಹಳ್ಳಿಗಳಲ್ಲಿನ ನೀರಿನ ಮೂಲಗಳನ್ನು ಗುರುತಿಸಲು ಮಕ್ಕಳಿಗೆ ಹೇಳಲಾಯಿತು. ಮಕ್ಕಳು ಜಂಬಲದಿನ್ನಿ, ಹಿರೇಹುನಕುಂಟಿ ಮತ್ತು ತಾರಿವಾಳ ಎಂಬ ಮೂರು ವಿಭಿನ್ನ ಹಳ್ಳಿಗಳಿಂದ ಬಂದಿದ್ದು ಅವರ ಅನುಭವಗಳು ಬೇರೆ ಬೇರೆಯಾಗಿದ್ದವು. ನಾವು ಅವರನ್ನು ಹತ್ತು ಗುಂಪುಗಳಾಗಿ ವಿಂಗಡಿಸಿ ಪ್ರತಿಯೊಂದು ಗುಂಪಿಗೂ ಒಂದು ಕಾರ್ಯ–ಯೋಜನೆಯನ್ನು ನೀಡಿ ಅದರ ಮೇಲೆ ಕೆಲಸ ಮಾಡಲು ಹೇಳಿದೆವು. ಕಾರ್ಯಯೋಜನೆಗೆ ನೀಡಿದ ವಿಷಯಗಳು ಹೀಗಿದ್ದವು:

1. ಜಂಬಲದಿನ್ನಿಯ ವಿದ್ಯಾರ್ಥಿಗಳಿಗೆ: ಇಪ್ಪತ್ತು ವರ್ಷಗಳ ಹಿಂದೆ ನಿಮ್ಮ ಹಳ್ಳಿಯಲ್ಲಿದ್ದ ನೀರಿನ ಮೂಲಗಳು.
2. ಹಿರೇಹುನಕುಂಟಿಯ ವಿದ್ಯಾರ್ಥಿಗಳಿಗೆ: ಇಪ್ಪತ್ತು ವರ್ಷಗಳ ಹಿಂದೆ ನಿಮ್ಮ ಊರಿನಲ್ಲಿದ್ದ ನೀರಿನ ಮೂಲಗಳು.
3. ತಾರಿವಾಳದ ವಿದ್ಯಾರ್ಥಿಗಳಿಗೆ: ನಿಮ್ಮ ಹಳ್ಳಿಯಲ್ಲಿ ಇಪ್ಪತ್ತು ವರ್ಷಗಳ ಹಿಂದೆ ಇದ್ದ ನೀರಿನ ಮೂಲಗಳು.
4. ಈ ಮೂರು ಹಳ್ಳಿಗಳಲ್ಲೂ ಈಗಿರುವ ನೀರಿನ ಮೂಲಗಳು.
5. ನಿಮ್ಮ ಹಳ್ಳಿಯಲ್ಲಿ ನೀರಿನ ದುರುಪಯೋಗ.
6. ಒಂದು ದಿನದಲ್ಲಿ, ಒಂದು ತಿಂಗಳಿನಲ್ಲಿ ಮತ್ತು ಒಂದು ವರ್ಷದಲ್ಲಿ ಒಂದು ಕುಟುಂಬ ಅಥವಾ ಮನೆಯಲ್ಲಿ ಕುಡಿಯಲು ಉಪಯೋಗಿಸುವ ನೀರಿನ ಪ್ರಮಾಣ; ನೀರನ್ನು ಸಂರಕ್ಷಿಸಲು ಸಾಧ್ಯವಾದ ಮಾರ್ಗೋಪಾಯಗಳು ಮತ್ತು ಉಳಿಸಲು ಸಾಧ್ಯವಾಗಬಹುದಾದ ನೀರಿನ ಪ್ರ.ಮಾಣ.
7. ನೀರಿನ ವಿಷಯಕ್ಕೆ ಸಂಬಂಧಿಸಿದಂತೆ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳು ಮತ್ತು ಅದರಲ್ಲಿ ಪ್ರತಿಪಾದಿಸಲಾಗಿರುವ ವಿಚಾರಗಳು.

೮. ಶೌಚಾಲಯಗಳು ಮತ್ತು ಶೌಚಾಲಯಗಳಲ್ಲಿ ನೀರಿನ ಉಪಯೋಗ.
೯. ಕೃಷಿ ಮತ್ತು ನೀರಾವರಿಯಲ್ಲಿ ನೀರಿನ ಉಪಯೋಗ.
10. ಮಳೆನೀರಿನ ಕೊಯ್ಲು ಮಾಡಲು ನಿಮ್ಮ ಹಳ್ಳಿಯಲ್ಲಿ ತೆಗೆದುಕೊಳ್ಳಲಾಗಿರುವ ಕ್ರಮಗಳು.

ಮಕ್ಕಳು ತಮ್ಮ ಪೋಷಕರೊಂದಿಗೆ, ಹಳ್ಳಿಯ ಹಿರಿಯರು ಮತ್ತು ಮುಖಂಡರೊಂದಿಗೆ, ಹಳ್ಳಿಯ ಪಂಚಾಯಿತಿ ಸದಸ್ಯರೊಂದಿಗೆ ಚರ್ಚಿಸಿ ತಮ್ಮ ನಿಲುವನ್ನು ನಿರ್ಧರಿಸಿ ಒಂದು ತಿಂಗಳಲ್ಲಿ ತಮ್ಮ ವರದಿಯನ್ನು ಸಿದ್ಧಪಡಿಸಿದರು. ಬೇರೆಬೇರೆ ತರಗತಿಗಳ ಮಕ್ಕಳನ್ನು ಒಳಗೊಂಡ ವಿಭಿನ್ನ ಗುಂಪುಗಳೊಂದಿಗೆ ನಾವು ಈ ವರದಿಯನ್ನು ಅನೇಕ ಬಾರಿ ಚರ್ಚಿಸಿದೆವು ಮತ್ತು ಈ ವರದಿಗಳ ಗುಣಮಟ್ಟವನ್ನು ಉತ್ತಮಪಡಿಸಲು ಅವರಿಗೆ ಸಲಹೆಗಳನ್ನು ನೀಡಿದೆವು. ಮಾಹಿತಿ ಸಂಗ್ರಹಣೆಯಲ್ಲಿ ಮತ್ತು ವರದಿಗಳ ಕುರಿತಾದ ಚರ್ಚೆಯಲ್ಲಿ ಮಕ್ಕಳು ಬಹಳ ಉತ್ಸಾಹದಿಂದ ಭಾಗವಹಿಸಿದರು. 'ಮೇಳ'ದ ದಿನ ಯಾವತ್ತು ಎಂಬುದನ್ನು ನಿರ್ಧರಿಸಲಾಯಿತು ಮತ್ತು ಎಲ್ಲಾ ವಿದ್ಯಾರ್ಥಿಗಳ ವರದಿಗಳ ಮಂಡನೆಗೆ ವೇಳಾಪಟ್ಟಿಯನ್ನೂ ನಿಗದಿ ಮಾಡಲಾಯಿತು. ಹಳ್ಳಿಯ ಜನರನ್ನು ಇದಕ್ಕೆ ಆಹ್ವಾನಿಸಲಾಯಿತು. ಅನೇಕ ಕಾರಣಗಳಿಂದಾಗಿ ವಿದ್ಯಾರ್ಥಿಗಳ ಈ ಒಂದು ಸಭೆಯು, ಈ ರೀತಿಯ ಇತರ ವಿದ್ಯಾರ್ಥಿಗಳ ಸಭೆಗಳಿಗಿಂತ ಭಿನ್ನವಾಗಿತ್ತು. ಸಭೆಯಲ್ಲಿ ಹಂಚಿಕೊಳ್ಳಲಾದ ಮಾಹಿತಿಯನ್ನು ವಿದ್ಯಾರ್ಥಿಗಳು ತಾವೇ ಸಂಗ್ರಹಿಸಿದ್ದರು. ಅವರ ತಿಳುವಳಿಕೆಯು ಅವರದ್ದೇ ಆದ ಅನುಭವದ ಭಾಗವಾಗಿತ್ತು. ಹೀಗಾಗಿ ತಾವು ಮಂಡಿಸಿದ ಹಾಗೂ ಚರ್ಚಿಸಿದ ವಿಷಯಗಳ ಮೇಲೆ ಅವರಿಗೆ ಪ್ರಭುತ್ವವಿತ್ತು. ಇತರ ವಿಷಯಗಳ ಜೊತೆಯಲ್ಲಿ ವಿದ್ಯಾರ್ಥಿಗಳು ನೀರಿನ ಸಂರಕ್ಷಣೆಯ ಸಮಸ್ಯೆಗಳ ಬಗ್ಗೆ ಚರ್ಚಿಸಿದರು ಮತ್ತು ಈ ಮುಖ್ಯ ಸಂಪನ್ಮೂಲದ ಸದುಪಯೋಗದ ಬಗ್ಗೆ ಅಮೂಲ್ಯ ಸಲಹೆಗಳನ್ನು ನೀಡಿದರು. ಹಳ್ಳಿಯ ಜನರು ತಮಗೇ ಗೊತ್ತಿಲ್ಲದಂತಹ ಕೆಲವೊಂದು ವಿಷಯಗಳನ್ನು ಮಕ್ಕಳಿಂದ ಕೇಳಿ ಪ್ರಭಾವಿತರಾದರು ಮತ್ತು ಸಂತೋಷಪಟ್ಟರು. ಚರ್ಚೆಯನ್ನು ಸಂಪದ್ಭರಿತಗೊಳಿಸಲು ಅವರೂ ಸಹ ತಮ್ಮ ವಿಚಾರಗಳನ್ನು ಮುಂದಿಟ್ಟರು. ಮಕ್ಕಳಿಗೆ ಈ ಕಾರ್ಯಯೋಜನೆಗಳನ್ನು ನಿಗದಿಪಡಿಸಿದಾಗ ನಮಗೆ ಒಂದಿಷ್ಟು ಹಿಂಜರಿಕೆಯಿತ್ತು. ಅಂತಹ ಕೆಲಸವನ್ನು ನಿರ್ವಹಿಸಲು ಅವರಿಗೆ ಸಾಮರ್ಥ್ಯವಿದೆಯೇ ಎಂಬ ಬಗ್ಗೆ ನಮಗೆ ನಮ್ಮದೇ ಆದ ಅನುಮಾನಗಳಿದ್ದವು. ಆದರೆ ಮಾಹಿತಿಯನ್ನು ಮತ್ತು ದತ್ತಾಂಶಗಳನ್ನು ಸಂಗ್ರಹಿಸುವುದರಲ್ಲಿ ಮತ್ತು ತಮ್ಮ ವಿಚಾರಗಳನ್ನು ಮಂಡಿಸುವುದರಲ್ಲಿ ಅವರಿಗಿದ್ದ ಉತ್ಸಾಹವನ್ನು ನೋಡಿ ನಮಗೆ ಅವರ ಬಗ್ಗೆ ಹೆಮ್ಮೆ ಮೂಡಿಸಿತು. ವಿದ್ಯಾರ್ಥಿಗಳು ತಾವು ಏನನ್ನು ಕಲಿಯುತ್ತಾರೋ ಅದರಲ್ಲಿ ಅವರನ್ನು ತೊಡಗಿಸುವುದು ಎಷ್ಟು ಪರಿಣಾಮಕಾರಿ ಎಂಬುದನ್ನು ಮತ್ತು ನಮ್ಮ ಬೋಧನಾ ವಿಧಾನದಲ್ಲಿ ವಿದ್ಯಾರ್ಥಿ ಕೇಂದ್ರಿತ ಕಲಿಕಾ ಅಭ್ಯಾಸಗಳನ್ನು ಸೇರಿಸುವುದು ಎಷ್ಟು ಮುಖ್ಯ ಎಂಬುದನ್ನು ಈ ಅನುಭವವು ನಮಗೆ ಕಲಿಸಿತು. ಈ ಕಾರ್ಯಯೋಜನೆಯಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ನೋಡಿದ ಶಿಕ್ಷಕರು ಈಗ ವಿದ್ಯಾರ್ಥಿಗಳ ಕ್ರಿಯಾಶೀಲ ಭಾಗವಹಿಸುವಿಕೆಯನ್ನು ಪಡೆದುಕೊಳ್ಳಲು ಈ ವಿಧಾನಕ್ಕೆ ಮಹತ್ವವನ್ನು ನೀಡುತ್ತಿದ್ದಾರೆ.

ಈ ಲೇಖನವನ್ನು ಬರೆಯುವುದಕ್ಕೂ ಸ್ವಲ್ಪ ಮುಂಚೆ, ಈ ಕಾರ್ಯಯೋಜನೆಯಿಂದ ಅವರೇನು ಕಲಿತಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ನಾನು ವಿದ್ಯಾರ್ಥಿಗಳೊಂದಿಗೆ ಮಾತನಾಡಿದೆ. ಅನೇಕ ತಿಂಗಳುಗಳು ಉರುಳಿಹೋಗಿದ್ದರೂ ವಿದ್ಯಾರ್ಥಿಗಳು ತಾವು ಕಲಿತದ್ದನ್ನು ಮರೆತಿರಲಿಲ್ಲ ಎಂಬುದನ್ನು ಕಂಡು ನನಗೆ ಅಚ್ಚರಿಯಾಯಿತು. ಅವರು ಅಷ್ಟೊಂದು ಚೆನ್ನಾಗಿ ವಿವರಗಳನ್ನು ಹೇಗೆ ನೆನಪಿನಲ್ಲಿಟ್ಟುಕೊಂಡಿದ್ದಾರೆ ಎಂದು ನಾನು ಕೇಳಿದಾಗ ಅವರು, "ಸರ್, ನಾವೇ ಮಾಡಿದ್ದನ್ನು ನಾವೇ ಹೇಗೆ ಮರೆಯಲು ಸಾಧ್ಯ? ಎಂದರು. ವಿದ್ಯಾರ್ಥಿಗಳ ಅನುಭವ, ಶಿಕ್ಷಕರ ಪ್ರತಿಕ್ರಿಯೆ ಮತ್ತು ಇದರಿಂದಾಗಿ ನನಗೆ ದೊರಕಿದ ಒಳನೋಟಗಳು ಇವೆಲ್ಲವೂ ಕೂಡ, ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಹಾಗೂ ಭಾವನಾತ್ಮಕ ಕಲಿಕೆಯನ್ನು ಬೆಳೆಸಲು ಕಾರ್ಯಯೋಜನೆ ಆಧಾರಿತ ವಿಧಾನವೇ ಅತ್ಯುತ್ತಮ ಮಾರ್ಗ ಎಂಬ ತೀರ್ಮಾನಕ್ಕೆ ಬರಲು ನನಗೆ ನೆರವಾಗಿವೆ.

## ಯೋಜನಾ ಮೇಳದಲ್ಲಿ ಸಮಾಜೋ ಭಾವನಾತ್ಮಕ ಕಲಿಕೆಗೆ ಇರುವ ಅವಕಾಶ

### ವಿದ್ಯಾರ್ಥಿಗಳ ಸಭೆಗಳು

ಯೋಜನಾ ಕಾರ್ಯವನ್ನು ನೀಡಲು, ಜವಾಬ್ದಾರಿಗಳನ್ನು ಹಂಚಿಕೊಳ್ಳಲು ಮತ್ತು ದತ್ತಾಂಶ ಹಾಗೂ ಮಾಹಿತಿಗಳನ್ನು ಕುರಿತು ಚರ್ಚಿಸಲು ವಿದ್ಯಾರ್ಥಿಗಳ ಸಭೆಗಳನ್ನು ನಿಯಮಿತವಾಗಿ ನಡೆಸಲಾಯಿತು. ಈ ಸಭೆಗಳು, ಯಾವ ಹಿಂಜರಿಕೆಯೂ ಇಲ್ಲದೆ, ತಮ್ಮ ಅಭಿಪ್ರಾಯ ಸರಿಯೋ, ತಪ್ಪೋ ಎಂಬ ನ್ಯಾಯನಿರ್ಣಯಗಳ ಭಯವಿಲ್ಲದೆ ಅವರು ವಿಚಾರಗಳನ್ನು ಹೇಳಿಕೊಳ್ಳಲು ವಿದ್ಯಾರ್ಥಿಗಳಿಗೆ ವೇದಿಕೆಯನ್ನು ಒದಗಿಸಿದವು. ಇದು, ತಮ್ಮನ್ನೇ ಅಭಿವ್ಯಕ್ತಿಗೊಳಿಸಿಕೊಳ್ಳುವ ಸಾಮರ್ಥ್ಯ, ನಾಯಕತ್ವ, ತೀರ್ಮಾನ ಮಾಡುವ ಶಕ್ತಿ, ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕುವಲ್ಲಿ ಆತ್ಮವಿಶ್ವಾಸ ಮತ್ತು ಒಂದು ಉದ್ದೇಶಕ್ಕೆ ಬದ್ಧರಾಗಿರುವುದು ಇಂತಹ ಗುಣಗಳನ್ನು ಅವರಲ್ಲಿ ಬೆಳೆಸಲು ನೆರವಾಯಿತು.

### ಗುಂಪು ಚಟುವಟಿಕೆ

ಮಕ್ಕಳು 5–6 ಜನರ ತಂಡದಲ್ಲಿ ಕೆಲಸ ಮಾಡಿದರು. ಪ್ರತಿಯೊಂದು ಗುಂಪಿನಲ್ಲೂ ವಿಭಿನ್ನ ಕಲಿಕಾ ಸಾಮರ್ಥ್ಯಗಳಿದ್ದ ಮಕ್ಕಳಿದ್ದರು. ಆದರೆ ಅವರು ಸಹಕಾರಿ ಮನೋಭಾವ, ಭಾಗವಹಿಸುವಿಕೆ ಮತ್ತು ಜವಾಬ್ದಾರಿ ಪ್ರಜ್ಞೆಗಳೊಂದಿಗೆ ಕೆಲಸ ಮಾಡಿದರು. ಇದು ಪರಸ್ಪರ ಕಲಿಕೆಯ ತತ್ವವನ್ನು ಆಚರಣೆಗೆ ತರಲು ವೇದಿಕೆಯಾಯಿತು. ಏಳನೇ ತರಗತಿಯ ಮಕ್ಕಳು 5

ಮತ್ತು 6ನೇ ತರಗತಿಯ ಮಕ್ಕಳಿಗೆ ಮಾರ್ಗದರ್ಶನ ಮಾಡಿದರು. ಹಿರಿಯ ವಿದ್ಯಾರ್ಥಿಗಳೊಂದಿಗೆ ವಿಚಾರ ವಿನಿಮಯ ಮಾಡಿ-ಕೊಳ್ಳುವುದನ್ನು ಕಿರಿಯ ವಿದ್ಯಾರ್ಥಿಗಳು ಇಷ್ಟಪಟ್ಟರು. "ತರಗತಿ ತಡೆಗೋಡೆ"ಗಳನ್ನು (grade barriers') ಮೀರಿ ಬೇರೆ ತರಗತಿಗಳ ವಿದ್ಯಾರ್ಥಿಗಳೊಂದಿಗೆ ಬೆರೆತು ಕಲಿಯುವುದು ಎಲ್ಲರಿಗೂ ಒಂದು ಮಹತ್ವದ ಅನುಭವವಾಯಿತು. ತಂಡಗಳಲ್ಲಿ ಕೆಲಸ ಮಾಡುವುದು ಮತ್ತು ತಂಡದ ಯಶಸ್ಸಿಗೆ ಸಾಕ್ಷಿಯಾಗುವುದು ಅವರನ್ನು ಪುಳಕಿತರನ್ನಾಗಿಸಿತು. ಅವರ ಪುಳಕವು ನನ್ನ ಮನಸ್ಸಿನಲ್ಲಿ ಅಚ್ಚಳಿಯದಂತೆ ಮುದ್ರೆಯೊತ್ತಿದೆ.

### ಸ್ವತಂತ್ರವಾಗಿ ಬರೆಯುವುದು

ಬೇರೆಯವರೊಂದಿಗೆ ಚರ್ಚಿಸಿದ್ದನ್ನು ಮತ್ತು ತಾವೇ ವೀಕ್ಷಿಸಿದ್ದನ್ನು ಬರೆದಿಡಲು ಮಕ್ಕಳಿಗೆ ಪ್ರೋತ್ಸಾಹ ನೀಡಲಾಯಿತು. ಇದು ಅವರಿಗೆ ತಮ್ಮ ವಿಚಾರಗಳು, ಭಾವನೆಗಳು ಮತ್ತು ಒಳನೋಟಗಳನ್ನು ರೂಪಿಸಿಕೊಳ್ಳಲು, ಒಟ್ಟಾರೆ ತಮ್ಮನ್ನೇ ಅಭಿವ್ಯಕ್ತಿಸಿಕೊಳ್ಳಲು ಅವಕಾಶ ನೀಡಿತು ಮತ್ತು ಇದು ಅವರಿಗೆ ನೆಮ್ಮದಿ ನೀಡುವ ಮತ್ತು ಅವರ ತಿಳುವಳಿಕೆಯನ್ನು ಸಮೃದ್ಧಗೊಳಿಸುವ ಅನುಭವ ಎನ್ನಿಸಿತು.

### ಗಟ್ಟಿಯಾಗಿ ಓದುವುದು

ತಮ್ಮ ತಂಡಗಳಿಗಾಗಿ ಅವರು ಏನನ್ನು ಬರೆದಿದ್ದರು ಮತ್ತು ಬೇರೆಯ ತಂಡಗಳಿಗಾಗಿ ಏನು ಬರೆದಿದ್ದರು ಅದನ್ನು ಗಟ್ಟಿಯಾಗಿ ಓದಲು ಹೇಳಲಾಯಿತು. ಇದು ಅವರಿಗೆ ಆತ್ಮವಿಶ್ವಾಸದಿಂದ ಓದಲು ಮಾತ್ರವಲ್ಲದೆ, ಬೇರೆಯವರನ್ನು ಕೇಳಿಸಿಕೊಳ್ಳಲು ಮತ್ತು ಇತರರ ವಿಚಾರಗಳು, ಭಾವನೆಗಳು ಮತ್ತು ದೃಷ್ಟಿಕೋನಗಳನ್ನು ಅರ್ಥಮಾಡಿಕೊಳ್ಳಲಿಕ್ಕೆ ಸಂವೇದನಾಶೀಲರಾಗಲು ಒಂದು ಅವಕಾಶವನ್ನು ನೀಡಿತು.

### ಸಮುದಾಯದೊಂದಿಗೆ ವಿಚಾರ ವಿನಿಮಯ

ನೀರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಮುದಾಯದ ಅನುಭವಗಳ ಕುರಿತು (ಅವರಿಗಿರುವ ಸೌಲಭ್ಯಗಳು ಮತ್ತು ಅವರು ಎದುರಿಸುವ ಸಮಸ್ಯೆಗಳು ಇತ್ಯಾದಿ) ಸಮುದಾಯ-ದೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳುವುದರಿಂದ, ನೀರಿನ ಬಿಕ್ಕಟ್ಟಿನ ಕುರಿತಾಗಿ ಮಕ್ಕಳನ್ನು ಸಂವೇದನಾಶೀಲರನ್ನಾಗಿ ಮಾಡಲಾಯಿತು ಮತ್ತು ತಮ್ಮ ಸುತ್ತಲಿನ ಜಗತ್ತಿನ ಕುರಿತು ಅವರು ತಿಳುವಳಿಕೆಯನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು. ಸಮುದಾಯದ ಸದಸ್ಯರೊಂದಿಗೆ ವಿಚಾರ ವಿನಿಮಯ ಮಾಡಿಕೊಂಡಿದ್ದರಿಂದ ಅದು ಅವರೊಂದಿಗೆ ಸಾಮಾಜಿಕ ಸಂಬಂಧಗಳನ್ನು ಬೆಳೆಸಿಕೊಳ್ಳಲು ಮಕ್ಕಳಿಗೆ ಸಹಾಯಕ-ವಾಯಿತು. ಸಕ್ರಿಯವಾಗಿ ಕೇಳಿಸಿಕೊಳ್ಳುವುದು, ಸಹಕಾರ ಮತ್ತು ಪರಸ್ಪರ ಬೆಂಬಲ ನೀಡುವಿಕೆ ಇವುಗಳ ಪ್ರಾಮುಖ್ಯತೆಯನ್ನು ಅವರು ಮನವರಿಕೆ ಮಾಡಿಕೊಂಡರು.

### ಕಾಲಮಿತಿಯಲ್ಲಿ ಕೆಲಸ ಮಾಡುವುದಕ್ಕೆ ಮೆಚ್ಚುಗೆ

ಯಾವುದೇ ಕೆಲಸವನ್ನು ಮಾಡಲು ಮಕ್ಕಳಿಗೆ ಕಾಲಮಿತಿಯನ್ನು ನಿಗದಿಪಡಿಸಲಾಗುತ್ತಿತ್ತು ಮತ್ತು ಸಕಾಲದಲ್ಲಿ ಅವರು ಕೆಲಸ ಮಾಡಿ ಮುಗಿಸಿದಾಗ ಅದನ್ನು ಮೆಚ್ಚಿಕೊಳ್ಳಲಾಗುತ್ತಿತ್ತು. ತಮ್ಮ ಸಾಧನೆಗಳನ್ನು ತಾವೇ ವಿಶ್ಲೇಷಿಸಿ ಅದನ್ನು ಉತ್ತಮಪಡಿಸಿಕೊಳ್ಳಲು ಅವರಿಗೆ ಹೇಳಲಾಯಿತು. ನಂತರ ಕ್ರಮೇಣ ಅವರಿಗೆ ಹೆಚ್ಚು ಸಂಕೀರ್ಣವಾದ ಕೆಲಸಗಳನ್ನು ನೀಡಿ, ಅದನ್ನು ಸಾಧಿಸಲು ಮಾರ್ಗದರ್ಶನ, ಪ್ರೋತ್ಸಾಹ ಮತ್ತು ಬೆಂಬಲವನ್ನು ಒದಗಿಸಲಾಯಿತು. ಹೀಗೆ ಒಂದು ಗುರಿಯನ್ನು ನಿಗದಿಪಡಿಸುವುದು, ಅವರ ಸಾಧನೆಯನ್ನು ಉತ್ತಮಪಡಿಸುವುದು ಮತ್ತು ನಂತರ ಇನ್ನೂ ಉನ್ನತ ಮಟ್ಟದ ಗುರಿಯನ್ನು ನಿಗದಿಪಡಿಸುವುದು ಅವರಿಗೆ ಆತ್ಮವಿಶ್ವಾಸವನ್ನು ಮತ್ತು ದೃಢತೆ, ಸ್ಥೈರ್ಯ, ಭದ್ರತೆಯನ್ನು ಒದಗಿಸಿತು. ಅವರಿಗೆ ದೊರೆತ ಪ್ರೋತ್ಸಾಹವು ಅವರು ಇನ್ನೂ ಚೆನ್ನಾಗಿ ಕೆಲಸ ಮಾಡಲು ಪ್ರೇರಣೆ ನೀಡಿತು.

### ಕಾರ್ಯ ಯೋಜನೆಯನ್ನು ಪ್ರಸ್ತುತಿಪಡಿಸುವುದು

ತಮ್ಮ ಕಾರ್ಯಯೋಜನೆಯನ್ನು ಮುಗಿಸಿದ ನಂತರ, ತಾವು ಮುಗಿಸಿದ ಚಟುವಟಿಕೆಯ ಬಗ್ಗೆ ಭಿತ್ತಿಪತ್ರಗಳನ್ನು ತಯಾರಿಸಬೇಕೆಂದೂ ಮತ್ತು ಅದನ್ನು ಪ್ರೇಕ್ಷಕರ ಮುಂದೆ ಪ್ರದರ್ಶಿಸಬೇಕೆಂದೂ ಅವರಿಗೆ ತಿಳಿಸಲಾಯಿತು. ಪ್ರೇಕ್ಷಕರ ಪ್ರಶ್ನೆಗಳನ್ನು ಗಮನಕೊಟ್ಟು ಕೇಳಿಸಿಕೊಳ್ಳುವುದು, ಅದಕ್ಕೆ ತಾಳ್ಮೆಯಿಂದ ಪ್ರತಿಕ್ರಿಯಿಸುವುದು ಮತ್ತು ಸಮಂಜಸವಾದ ಟೀಕೆಯನ್ನು ಒಪ್ಪಿಕೊಳ್ಳುವುದು ಈ ಅಂಶಗಳು ಅವರ ಪ್ರಸ್ತುತಿ ಕೌಶಲಗಳನ್ನು ಸಾಣೆ ಹಿಡಿದಂತೆ ಉತ್ತಮಪಡಿಸಿದವು.

## ನೀರು ಮತ್ತು ಮಾನವ ಮೌಲ್ಯಗಳು

ಈಗಾಗಲೇ ಹೇಳಿದಂತೆ ನೀರಿಗೆ ಸಂಬಂಧಿಸಿದಂತೆ ಅನೇಕ ವಿಷಯಗಳ ಬಗ್ಗೆ ಚರ್ಚೆಗಳನ್ನು ನಡೆಸಲಾಯಿತು; ಉದಾ: ನೀರಿನ ಮೂಲಗಳು, ಉಪಯೋಗ ಮತ್ತು ದುರುಪಯೋಗ, ಒಂದು ಮನೆಯಲ್ಲಿ ಅಥವಾ ಹಳ್ಳಿಯಲ್ಲಿ ಪ್ರತಿದಿನ, ತಿಂಗಳು ಅಥವಾ ವರ್ಷದಲ್ಲಿ ಉಪಯೋಗಿಸುವ ನೀರಿನ ಪ್ರಮಾಣ; ಶೌಚಾಲಯದಲ್ಲಿ ಉಪಯೋಗಿಸುವ ನೀರು; ಮತ್ತು ನೀರನ್ನು ಉಳಿಸುವ ಸಾಧ್ಯತೆಗಳು. ಈ ಚರ್ಚೆಗಳು ಬದುಕಿಗೆ ನೀರು ಎಷ್ಟು ಮುಖ್ಯ ಎಂಬ ಅರಿವನ್ನು ಮಕ್ಕಳಲ್ಲಿ ಬೆಳೆಸಲು ಮತ್ತು ನೀರಿನ ಜೊತೆ ಸಂಬಂಧ ಹೊಂದಿದ ಮಾನವ ಮೌಲ್ಯಗಳನ್ನು ಗುರುತಿಸಲು ನೆರವಾದವು. ಕೆಳಗೆ ಪಟ್ಟಿ ಮಾಡಿದಂತೆ ಅನೇಕ ವಿಷಯಗಳ ಕುರಿತಾದಂತೆ ಅವರ ತಿಳುವಳಿಕೆಯಲ್ಲಿ ಅಭಿವೃದ್ಧಿಯುಂಟಾಯಿತು.

- ಎಲ್ಲ ಜೀವಿಗಳ ನಡುವೆ ಇರುವ ಸಂಬಂಧ ಮತ್ತು ಅವುಗಳಿಗೆ

ನೀರಿನ ಮೇಲೆ ಇರುವ ಅವಲಂಬನೆ.

- ಶುಚಿತ್ವ ಮತ್ತು ನೈರ್ಮಲ್ಯದ ಬಗ್ಗೆ ಕಲಿಯಬೇಕಾದ ಅಗತ್ಯತೆ.
- ನೀರಿಗೆ ಸಂಬಂಧಿಸಿದ ನೈರ್ಮಲ್ಯ, ನೀರಿನ ಮೂಲಗಳು ಮತ್ತು ನೀರಿನ ವಿತರಣಾ ವ್ಯವಸ್ಥೆಯ ಕುರಿತಾದ ಅರಿವಿನ ಪ್ರಾಮುಖ್ಯತೆ.
- ಎಲ್ಲಾ ವರ್ಗಗಳ ಜನರಿಗೂ ಸಮಾನವಾಗಿ ನ್ಯಾಯಯುತವಾಗಿ ನೀರು ದೊರಕುವಂತೆ ಮಾಡಲು ನೀರಿನ ವಿತರಣೆಯನ್ನು ಪ್ರಜಾತಾಂತ್ರಿಕಗೊಳಿಸುವುದು ಮತ್ತು ನೀರಿನ ಮೂಲಗಳನ್ನು ಪಡೆದುಕೊಳ್ಳುವಲ್ಲಿ ಕೆಲವರಿಗಿರುವ ಸವಲತ್ತುಗಾರ ಪದ್ಧತಿಗಳನ್ನು ತಿರಸ್ಕರಿಸುವುದು.
- ನೀರಿನ ಮೂಲಗಳ ಸರಿಯಾದ ಉಪಯೋಗ ಮತ್ತು ದುರುಪಯೋಗವನ್ನು ನಿಲ್ಲಿಸುವುದು.
- ನೀರಿಗೆ ಸಂಬಂಧಿಸಿದಂತೆ ಸಂರಕ್ಷಣೆ, ಪ್ರಕೃತಿಯ ಕುರಿತು ಗೌರವ ಮತ್ತು ಸರಿಯಾದ ಹಾಗೂ ತಪ್ಪಾದ ನಡವಳಿಕೆ.
- ನೀರಿಗೆ ಸಂಬಂಧಿಸಿದಂತೆ ವಿವೇಕಯುತ ಮತ್ತು ನ್ಯಾಯಬದ್ಧ ನಡವಳಿಕೆ. ಉದಾ: ಕಾನೂನಾತ್ಮಕವಾಗಿ ನೀರಿನ ಸೌಲಭ್ಯವನ್ನು ಪಡೆದುಕೊಳ್ಳುವುದು ಮತ್ತು ನೀರಿನ ಶುಲ್ಕವನ್ನು ಪಾವತಿ ಮಾಡಬೇಕಾದ ಸಾಮಾಜಿಕ ಜವಾಬ್ದಾರಿಯನ್ನು ಗೌರವಿಸುವುದು.

## ಸಿಂಹಾವಲೋಕನ

ಹಿಂದಿರುಗಿ ನೋಡಿದಾಗ ಇಡೀ ಕಾರ್ಯಯೋಜನೆಯಲ್ಲಿ ನನ್ನ ಪಾತ್ರವು ಎಷ್ಟು ಕಿರಿದಾಗಿತ್ತು ಎಂಬುದು ನನಗೆ ಮನವರಿಕೆಯಾಗುತ್ತದೆ. ಕೆಲವೊಂದು ಪ್ರಶ್ನೆಗಳನ್ನು ಎತ್ತುವುದು ಮಾತ್ರ ನನ್ನ ಕೆಲಸವಾಗಿತ್ತು. ವಿದ್ಯಾರ್ಥಿಗಳು ಅದನ್ನು ಆಧರಿಸಿಕೊಂಡು ತಾವಾಗಿಯೇ ನೀರಿನ ಮೂಲಗಳು ಮತ್ತಿತರ ಜಲಸಂಬಂಧಿ ವಿಷಯಗಳ ಕುರಿತಾಗಿ ಕಾರ್ಯ-ಯೋಜನೆಯನ್ನು ಕೈಗೆತ್ತಿಕೊಂಡರು ಮತ್ತು ಗಮನಾರ್ಹ ಮಾಹಿತಿಯನ್ನು ಸಂಗ್ರಹಿಸಿ ತಮ್ಮ ಶೋಧನೆಯನ್ನು ಮುಂದಿಟ್ಟರು. ಪ್ರಶ್ನೆಗಳನ್ನು ಕೇಳುವುದು, ಪ್ರತಿಕ್ರಿಯೆಗಳನ್ನು ಪಡೆದುಕೊಳ್ಳುವುದು, ಮಾಹಿತಿಯನ್ನು ವಿಶ್ಲೇಷಿಸುವುದು ಮತ್ತು ಅದನ್ನು ಕೇಳುಗರ ಎದುರು ಮಂಡಿಸುವುದು ಮುಂತಾದ ಕೌಶಲ್ಯಗಳನ್ನು ಅವರು ಕಲಿತುಕೊಂಡರು. ವಿದ್ಯಾರ್ಥಿಗಳ ಸಭೆಗಳಲ್ಲಿ ಮತ್ತು ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸುವುದು, ಸ್ವತಂತ್ರವಾಗಿ ಬರೆಯುವ ಪ್ರಯತ್ನ, ಜೋರಾಗಿ ಓದುವುದು ಮತ್ತು ಸಮುದಾಯದೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳುವುದು ಮತ್ತು ಗಡುವಿನೊಳಗೆ ಕೆಲಸವನ್ನು ಮುಗಿಸುವುದು ಈ ಎಲ್ಲಾ ವಿಷಯಗಳಿಗೂ ಸಂಬಂಧಿಸಿದಂತೆ ಅವರ ತೊಡಗಿಸಿಕೊಳ್ಳುವಿಕೆ ಬಹಳ ಪ್ರಶಂಸನೀಯವಾದದ್ದು. ಪ್ರಸ್ತುತಿ ಪಡಿಸುವ ಕಲೆ ಮತ್ತು ನಿರ್ಣಯ ಮಾಡುವ ಶಕ್ತಿಯಲ್ಲದೆ ಅವರು ಸ್ವಯಂ ಅರಿವನ್ನು ಮತ್ತು ಸಾಮಾಜಿಕ ಸಂಬಂಧಗಳ ಪ್ರಜ್ಞೆಯನ್ನು ಬೆಳೆಸಿಕೊಂಡರು. ಚಿಂತನೆ, ಅನ್ವೇಷಣೆ, ತೀರ್ಮಾನಕ್ಕೆ ಬರುವುದು – ಇವುಗಳನ್ನು ಅವರು ಕಲಿತರು; ಮತ್ತು ಈ ರೀತಿಯಲ್ಲಿ ಅವರು ನಾವು ಯಾವುದನ್ನು ಮೇಲಿನ ಮಟ್ಟದ ಕಲಿಕಾ ಕೌಶಲಗಳು ಎಂದು ಕರೆಯುತ್ತೇವೆಯೋ ಅದಕ್ಕೆ ಪರಿಚಯಿಸಲ್ಪಟ್ಟರು. ಅವರ ಚಟುವಟಿಕೆಗಳಲ್ಲಿ ಅಂಕಗಣಿತ ಮತ್ತು ಭಾಷಾ ಕೌಶಲಗಳು, ಪರಿಸರದ ಕುರಿತಾದ ಅರಿವು ಇವೆಲ್ಲವೂ ಸೇರಿದ್ದವು; ಅವರ ಕಲಿಕೆಗೆ ಸಾಮಾಜಿಕ ಮತ್ತು ಭಾವನಾತ್ಮಕ ಆಯಾಮಗಳಿದ್ದವು ಮತ್ತು ಎಲ್ಲಕ್ಕೂ ಮಿಗಿಲಾಗಿ ಅದರಲ್ಲಿ ನೀರಿನ ಪ್ರಾಮುಖ್ಯತೆ ಮತ್ತು ಪರಿಸರ ಪ್ರಜ್ಞೆಯನ್ನು ಕೇಂದ್ರವಾಗಿರಿಸಿಕೊಂಡ ಮಾನವ ಮೌಲ್ಯಗಳ ತಿಳುವಳಿಕೆಯೂ ಇತ್ತು. ತರಗತಿಯು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಅತ್ಯಂತ ಸೂಕ್ತ ತಾಣವಾಯಿತು. ಹೀಗಾಗಿ ಉತ್ತಮವಾಗಿ ರೂಪಿಸಲ್ಪಟ್ಟ ಕಾರ್ಯಯೋಜನೆಯು, ಕಲಿಕೆಯ ಅನೇಕ ಅಂಶಗಳಲ್ಲಿ ವಿದ್ಯಾರ್ಥಿಗಳನ್ನು ಹೇಗೆ ತೊಡಗಿಸಿಕೊಳ್ಳಬಹುದು ಎಂಬುದಕ್ಕೆ, ಈ ವಿದ್ಯಾರ್ಥಿ-ಕೇಂದ್ರಿತ ಸಾಮುದಾಯಿಕ



**ಚಿತ್ರ 1. ಒಬ್ಬ ವಿದ್ಯಾರ್ಥಿಯು ನೀರಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಅಜ್ಜಿಯಿಂದ ಮಾಹಿತಿ ಕಲೆಹಾಕುತ್ತಿರುವುದು**



**ಚಿತ್ರ 2. ಯೋಜನಾ ಮೇಳದ ಸಮಯದಲ್ಲಿ ವಿದ್ಯಾರ್ಥಿಗಳು ತಮ್ಮ ಕಾರ್ಯಯೋಜನೆಯನ್ನು ಪ್ರಸ್ತುತಪಡಿಸುತ್ತಿರುವುದು**



**ಚಿಕ್ಕವೀರೇಶ ಎಸ್.ವಿ** ಅವರು ಇಂಜಿನಿಯರಿಂಗ್‌ನಲ್ಲಿ ಪದವಿಯನ್ನು ಪಡೆದಿದ್ದಾರೆ. ಪ್ರಸ್ತುತ ಅವರು ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿಜ್ಞಾನ ಮತ್ತು ಗಣಿತ ವಿಷಯದಲ್ಲಿ ಅವರು ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ. ಶಾಲೆಗಳಲ್ಲಿ ಕಲಿಕಾ ಗಣಿತವನ್ನು ಅಭಿವೃದ್ಧಿಪಡಿಸಲು ಸಂಪನ್ಮೂಲಗಳನ್ನು ರಚಿಸುವ ಉದ್ದೇಶದಿಂದ ಅವರು ಕಲಿಕಾ ಚೇತರಿಕೆ ಸಂಪನ್ಮೂಲ ತಂಡದೊಂದಿಗೆ ಕಾರ್ಯನಿರ್ವಹಿಸಿದ್ದಾರೆ. ಅವರಿಗೆ ಓದುವುದು, ಬರೆಯುವುದು ಮತ್ತು ಶಾಲಾ ಶಿಕ್ಷಕರ ವೃತ್ತಿಪರ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವುದೆಂದರೆ ಅಚ್ಚುಮೆಚ್ಚು. ಅವರನ್ನು chikkaveeresha.v@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಮಂಜುನಾಥ್ ಬಿ. ಆರ್.** | ಪರಿಶೀಲನೆ: **ಲತಾ ಕೆ.ಸಿ.**